ದಿವ್ಯಾನೇ ಅವಳನ್ನು ಹೆದರಿಸಬೇಡ' ಎಂದಾಗ ಮಂಜುನಾಥ ಸುಮತಿಯ ಕಡೆ ನೋಡಿ ನಕ್ಕ.

'ಅವೇನು ಇಲ್ಲಿ ಬರೋಲ್ಲ, ಹೆದರಬೇಡಿ. ಇಷ್ಟರ ಮೇಲೆ ಬಂದರೂ ನಾನಿದೀನಲ್ಲಾ' ಎಂದಾಗ ಸುಮತಿ ನಾಚಿ ಕೈ ತೊಳೆಯಲು ಎದ್ದಳು.

'ಹೆದರಿಕೆ ಆದರೆ ಬನ್ನಿ ನಂಜೊತೆಗೆ' ಎಂದು ಮಂಜುನಾಥ ಹಿತ್ತಲಿನಲ್ಲಿ ಸ್ವಲ್ಪ ಹಿಂದಿದ್ದ ಬಚ್ಚಲಿನ ಕಡೆಗೆ ಕಾಲು ಹಾಕಿದಾಗ ಅವಳಿಗೆ ಆ ಕತ್ತಲಿನಲ್ಲಿ ಬರಿಕಾಲಲ್ಲಿ ಅಷ್ಟು ದೂರ ಹೋಗಲು ಹೆದರಿಕೆ ಎನ್ನಿಸಿದರೂ ಮಂಜುನಾಥ ಇದಾನಲ್ಲಾ ಜೊತೆಗೆ ಎನ್ನುವ ಧೈರ್ಯ. ದೊಡ್ಡ ಒಲೆಯಲ್ಲಿ ಉರಿಯುತ್ತಿದ್ದ ಕುಂಟೆಯಿಂದ ಬಚ್ಚಲಲ್ಲಿ ಮಂದ ಪ್ರಕಾಶವಿತ್ತು. ನೀರು ಹದವಾಗಿ ಬಿಸಿಯಾಗಿದ್ದು, ಆ ಚಳಿಗೆ ಮತ್ತಷ್ಟು ಬೇಕು ಎನಿಸುತ್ತಿತ್ತು. ಮಂಜುನಾಥ ತೀರಾ ಸನಿಹದಲ್ಲೇ ಮೈಗೆ ತಾಗುವಂತೆ ನಿಂತು ಹಂಡೆಯಿಂದ ಬಿಸಿ ನೀರು ಕೈಗೆ ತುಂಬಿಕೊಟ್ಟಾಗ ಬಿಸಿ ನೀರಿನ ಜೊತೆಗೆ ಅವನ ಬಿಸಿಯುಸಿರೂ ದೇಹಕ್ಕೆ ಶಾಖ ಕೊಟ್ಟಿತು. ಯಾಕೋ ಅವನು ಎದುರಿದ್ದಾಗ ಎದೆಯ ಬಡಿತದ ಲೆಕ್ಕ ತಪ್ಪುತ್ತಿತ್ತು. ಅದರ ಹೊಡೆತದ ಶಬ್ದ ಕಿವಿಗೆ ಜೋರಾಗಿ ಕೇಳಿಸುತ್ತಿತ್ತು. ನೀರಿನ ತಂಬಿಗೆಯನ್ನು ಹಿಂತಿರುಗಿ ಕೊಟ್ಟಾಗ ಕೊಂಚಕಾಲ ಹಾಗೆ ತಡೆದು ಮುಖವನ್ನು ಪ್ರೀತಿಯಿಂದ ನೋಡಿ ಅಕಸ್ಮಾತ್ ಎಂಬಂತೆ ಕೈ ಬೆರಳನ್ನು ಸವರಿದ್ದೂ ಬಹಳ ಹೊತ್ತಿನವರೆಗೆ ಅವನನ್ನು ತಲೆ ಎತ್ತಿ ನೋಡದಂತೆ ಮಾಡಿತ್ತು.

ರಾತ್ರಿ ಮಧ್ಯದ ಹಾಲಿನಲ್ಲಿ ಭಟ್ಟರು, ಮೂಕಾಂಬಿಕಮ್ಮ, ಮಂಜುನಾಥ ಮಲಗಿದರು. ಒಳಗಿನ ಕೋಣೆಯಲ್ಲಿ ಮಾಲತಿಯ ಸಂಸಾರದ ಬಿಡಾರ. ಹಾಲಿನ ತುದಿಗೆ ಹತ್ತಿದಂತಿದ್ದ ಚಿಕ್ಕ ಕೋಣೆಯಲ್ಲಿ ಇದ್ದ ಮರದ ಮಂಚದ ಮೇಲೆ ಸುಮತಿಯ ಹಾಸಿಗೆ. ಆ ಕೋಣೆಯಲ್ಲಿ ಇದ್ದ ಸ್ವಲ್ಪ ಜಾಗದಲ್ಲೇ ಗೋಡೆಗೆ ಹತ್ತಿದಂತೆ ಗೋಣಿ ಚೀಲದಲ್ಲಿ ಬತ್ತವನ್ನು ತುಂಬಿ ಏರಿಸಿಟ್ಟಿದ್ದರು. ಮೇಲೆ ನಾಗೊಂದಿಗೆಯಲ್ಲಿ, ಮಂಚದ ಕೆಳಗೆ ಏನೇನೊ ಡಬ್ಬಗಳು, ಹಳೆಯ ಸಾಮಾನುಗಳು. ಹೊಸ ಜಾಗ. ಎಷ್ಟು ಹೊರಳಿದರೂ ನಿದ್ದೆಯೇ ಇಲ್ಲ. ಮಧ್ಯೆ ಹಾವುಗಳ ನೆನಪು ಬೇರೆ. ಬತ್ತದ ಚೀಲದ ಕೆಳಗಿನಿಂದ, ಮಂಚದ ಕೆಳಗಿನಿಂದ ಸಾಮಾನಿನ ನಡುವೆಯಿಂದ ಹಾವು ಹರಿದು ಬಂದರೆ, ಮೇಲೆ ನಾಗೊಂದಿಗೆಯಿಂದ 'ಧಪ್ಪನೆ ಮೈ ಮೇಲೆ ಬಿದ್ದರೆ... ಏನೇನೋ ಕೆಟ್ಟ ಯೋಚನೆಗಳು ಈ ಮಧ್ಯೆ ಹುಲ್ಲಿನಲ್ಲಿ ಸರಿದು ಹೋದ ಹಾವು ಬೇರೆ. ಮೈ ಬಿಸಿಲಿಗೆ ಫಳ ಫಳ ಹೊಳೆಯುತ್ತಿತ್ತು. ಅದು ಹರಿದು ಸುಮತಿಯ ಕಡೆಗೆ ಬಂದಾಗ ಮಂಜುನಾಥ ಹೊಡೆದು ಸಾಯಿಸಿ, ಹೆದರಿದ್ದ ಸುಮತಿಯನ್ನು ಎದೆಗೆ ಒರಗಿಸಿಕೊಂಡು, 'ನಾನಿದೀನಲಾ ಹೆದರಬೇಡ' ಎಂದು ಕಿವಿಯಲ್ಲಿ ಪಿಸುನುಡಿಯುತ್ತಿದ್ದ. ಅವನು ಅವಳನ್ನು ಬಿಟ್ಟು ಆಚೆ ಹೋಗುತ್ತಿದ್ದಂತೆ ಎಲ್ಲಿಂದಲೋ ಬಂದ ದಾಸರ ಹಾವು ಹತ್ತಿರ ಬಂತು. ಅವಳನ್ನು ಓಡಲೂ ಬಿಡದೆ ತನ್ನ ದಪ್ಪ ಮೈಯಿಂದ ಅವಳನ್ನು ಬಿಗಿಯಾಗಿ ಸುತ್ತಿಹಾಕಿ ಉಸಿರು ಕಟ್ಟುವಂತೆ ಮಾಡಿತು. ಮುಖದ ಹತ್ತಿರ ಬಿಸಿಯುಸಿರು ಬಿಡ್ತಾ ಇದೆ. ಬಾಯಿಯ ಹತ್ತಿರ ಮೂತಿ ಇಟ್ಟು ಆತುರದಿಂದ ಒತ್ತುತ್ತಾ ಇದೆ ಬಾಯಿ ತೆಗೆಯುವುದಕ್ಕೂ ಆಗದ ಹಾಗೆ ಬಿಗಿಯಾಗಿ ಒತ್ತಿ ಹಿಡಿದಿದೆ. ಇನ್ನೇನು ತನ್ನನ್ನು ನುಂಗಿಯೇಬಿಡುತ್ತೆ. ಜೋರಾಗಿ ಬೆವರು ಕಿತ್ತು ಬಂದು ಸುಮತಿ ಒಮ್ಮೆ ಶಕ್ತಿಯೆಲ್ಲಾ ಉಪಯೋಗಿಸಿ ಮೈ ಜಾಡಿಸಿದಳು. ಹಾವಿನ ಹಿಡಿತ ಸಡಿಲವಾಗಿ ಬಾಯಿಯೂ ಬಿಡುಗಡೆ ಹೊಂದಿತು. ಹೊಸಿಲಾಚೆ ಶಬ್ದ ಸರಿದು ಹೋಯಿತು. ಸುಮತಿ ಒಮ್ಮೆ ಜೋರಾಗಿ ಕಿರುಚಿದಳು. ಹೊದಿಕೆ ಸರಿದ ಮೈ ತಣ್ಣನೆ ಗಾಳಿಗೆ ಕಂಪಿಸಿತು. ಸೆರಗು ಅಸ್ತವ್ಯಸ್ತವಾಗಿ ಹೋಗಿತ್ತು. ಕುಪ್ಪಸದ ಮೇಲಿನ ಭಾಗ ತೆರೆದುಕೊಂಡಿತ್ತು. ತುಟಿಗಳು ಹಸಿಹಸಿಯಾಗೇ ಇದ್ದವು.